# - ಉ ಡು ಪಿ  ನ ಗ ರ ಸ ಭೆ -

ಉನಸ.ಬಿ1.ಸಿಆರ್.ಕೊಪ್ರಾ/2009-10

ದಿನಾಂಕ 04.03.2010

## ಕೊಟೇಶನ್ ಪ್ರಕಟಣೆ

ಉಡುಪಿ ನಗರಸಭಾ ವ್ಯಾಪ್ತಿಯ ಮಳೆ ನೀರು ಹರಿಯುವ ತೋಡಿನ ಹೂಳನ್ನು ತೆಗೆದು ಸಾಗಿಸುವ ಬಗ್ಗೆ ಅರ್ಹ ಏಜೆನ್ಸಿ/ಗುತ್ತಿಗೆದಾರರಿಂದ ಹಿತಾಚಿ ಮತ್ತು ಟಿಪ್ಪರನ್ನು ಒದಗಿಸಲು ಕೊಟೇಶನನ್ನು ಆಹ್ವಾನಿಸಲಾಗಿದೆ. ಪೌರಾಯುಕ್ತರು ಅಥವಾ ಇವರಿಂದ ಅಧಿಕಾರ ಹೊಂದಿದವರು ದಿನಾಂಕ 20.03.2010 ರಂದು ಸಂಜೆ 4.30ರ ವರೆಗೆ ಕೊಟೇಶನನ್ನು ಸ್ವೀಕರಿಸಲಿರುವರು ರೂ. 1,000-00 ಅರ್ಜಿ ಶುಲ್ಕವನ್ನು ನಗರಸಭೆಗೆ ಪಾವತಿಸಿ ದಿನಾಂಕ 19.03.2010 ರಂದು ಸಂಜೆ 4.30ರ ವರೆಗೆ ಕೊಟೇಶನ್ ನಮೂನೆಯನ್ನು ಪಡೆದುಕೊಳ್ಳಬಹುದು. ಕೊಟೇಶನ್‌ನೊಂದಿಗೆ ರೂ. 10,000-00 ಮೊತ್ತದ ಇ.ಎಂ.ಡಿ. ಯನ್ನು ಡಿ.ಡಿ., ಟರ್ಮ್ ಡಿಪೋಸಿಟ್ ರೂಪದಲ್ಲಿ ಇಲ್ಲವೇ ನಗರಸಭೆಗೆ ನಗದಾಗಿ ಪಾವತಿಸಿ ಮೂಲ ರಶೀದಿಯನ್ನು ಲಗತ್ತಿಸತಕ್ಕದ್ದು. ಬಂದಿರುವ ಕೊಟೇಶನನ್ನು ದಿನಾಂಕ 19.03.2010 ರಂದು ಅಥವಾ ಸೂಕ್ತ ದಿನದಂದು ಹಾಜರಿರುವ ಏಜೆನ್ಸಿಯವರ ಸಮಕ್ಷಮ ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕಛೇರಿಯ ಸಂಬಂಧಪಟ್ಟವ ರನ್ನು ಸಂಪರ್ಕಿಸಿ ಪಡೆದುಕೊಳ್ಳಬಹುದು.

### - ಷ ರ ತ್ತು ಗ ಳು -

1) ಎಲ್ಲಾ ಕರಗಳನ್ನು, ಚಾಲಕನ ವೇತನ ಮತ್ತು ಇಂಧನ ವೆಚ್ಚ ಸೇರಿ ದರ ಸೂಚಿಸತಕ್ಕದ್ದು.
2) ಕಾರ್ಯಾದೇಶ ನೀಡಿದ ಏಳು ದಿವಸಗಳ ಒಳಗೆ ರೂ. 50-00ರ ಛಾಪಾ ಪತ್ರದಲ್ಲಿ ಕರಾರನ್ನು ಏರ್ಪಡಿಸಿಕೊಳ್ಳತಕ್ಕದ್ದು ಮತ್ತು ಕಾಮಗಾರಿ ಪ್ರಾರಂಭಿಸತಕ್ಕದ್ದು. ತಪ್ಪಿದಲ್ಲಿ ಇ.ಎಂ.ಡಿ. ಯನ್ನು ಮುಟ್ಟುಗೋಲು ಹಾಕಿಕೊಂಡು ಮರು ಕೊಟೇಶನ್ ಆಹ್ವಾನಿಸಿ ತಗಲುವ ಹೆಚ್ಚುವರಿ ಮೊತ್ತವನ್ನು ನಿಮ್ಮಿಂದ ಪಡೆಯಲಾಗುವುದು.
3) ಈ ಕಛೇರಿಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್/ಸಹಾಯಕ ಇಂಜಿನಿಯರ್/ ಕಿರಿಯ ಇಂಜಿನಿಯರ್‌ರವರ ಸುಪರ್ದಿನಲ್ಲಿ ಕಾಮಗಾರಿ ಕೈಗೊಳ್ಳತಕ್ಕದ್ದು.
4) ಬಿಲ್ಲಿನಿಂದ ಸರಕಾರಕ್ಕೆ ಸಲ್ಲತಕ್ಕ ಎಲ್ಲಾ ಕರಗಳನ್ನು ಕಡಿತಗೊಳಿಸಲಾಗುವುದು.
5) ಹೂಳೆತ್ತುವ ಮತ್ತು ಸಾಗಿಸುವ ಸಮಯದಲ್ಲಿ ಆಗುವ ಸಕಲ ಆಗುಹೋಗುಗಳಿಗೆ ಗುತ್ತಿಗೆ ದಾರರೇ ಜವಾಬ್ದಾರರು ಮತ್ತು ಹೂಳು ಸಾಗಿಸುವ ಸಮಯದಲ್ಲಿ ವಾಹನ ನಿಯಮಾವಳಿ ಪಾಲಿಸತಕ್ಕದ್ದು.
6) ಮೇಲಿನ ಶರತ್ತುಗಳಲ್ಲದೇ ಹೆಚ್ಚಿನ ಶರತ್ತುಗಳನ್ನು ವಿಧಿಸುವ ಹಕ್ಕನ್ನು ಕಾದಿರಿಸಿದೆ.
7) ಎತ್ತಿದ ಹೂಳನ್ನು ತೋಡಿನ ಬದಿಯಲ್ಲಿಯೇ ಪೇರಿಸುವ ಸಂದರ್ಭದಲ್ಲಿ ಮಳೆಯ ನೀರಿ ನಿಂದ ಹೂಳು ಪುನಃ ತೋಡಿಗೆ ಹರಿದು ಬಾರದಂತೆ ಪರಿಶೀಲಿಸಿ ಹಾಕುವುದು.
8) ಯಾವುದೇ ಸಂದರ್ಭಗಳಲ್ಲಿಯೂ ಮುಂಗಡ ಹಣ ನೀಡಲಾಗುವುದಿಲ್ಲ.
9) ಸ್ವಂತ ಹಿತಾಚಿ ಮತ್ತು ಟಿಪ್ಪರ್ ಉಳ್ಳವರು ಮಾತ್ರ ಕೊಟೇಶನ್‌ನಲ್ಲಿ ಭಾಗವಹಿಸಬಹುದು. ಈ ಬಗ್ಗೆ ದಾಖಲೆಯನ್ನು ಕೊಟೇಶನ್‌ನೊಂದಿಗೆ ಸಲ್ಲಿಸತಕ್ಕದ್ದು.
10) ಪ್ರತೀ ದಿನ ಲಾಗ್ ಬುಕ್ ಬರೆದು (ಕೆಲಸ ನಡೆದ ದಿವಸದ) ಸಂಬಂಧಪಟ್ಟ ಸಹಾಯಕ ಇಂಜಿನಿಯರ್/ಕಿರಿಯ ಇಂಜಿನಿಯರ್‌ರವರಿಂದ ದೃಢೀಕರಿಸಿಕೊಳ್ಳತಕ್ಕದ್ದು ಮತ್ತು ಇದನ್ನು ಬಿಲ್ಲಿನೊಂದಿಗೆ ಲಗತ್ತಿಸತಕ್ಕದ್ದು.

ಅಧ್ಯಕ್ಷರು
ಉಡುಪಿ ನಗರಸಭೆ

ಪೌರಾಯುಕ್ತರು
ಪೌರ ಆಯುಕ್ತರು
ಉಡುಪಿ ನಗರಸಭೆ
ನಗರ ಸಭೆ, ಉಡುಪಿ